***P.W-2***

**<u>ದಿನಾಂಕಃ 09-10-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.</u>**

**<u>ಪಾಟೀ ಸವಾಲುಃ</u>** 1 ನೇ ಎದುರುದಾರರ ಪರ ವಕೀಲರಾದ ಶ್ರೀ N.I.H ವಕೀಲರನ್ನು ಪದೇ-ಪದೇ ಕೂಗಿ ಕರೆಯಿಸಲಾಗಿ, ಗೈರು ಹಾಜರು ಇರುವುದರಿಂದ ಪಾಟೀ ಸವಾಲು ಇಲ್ಲಾ ಎಂದು ತೆಗೆದುಕೊಳ್ಳಲಾಯಿತು .

**<u>ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ.ಎಸ್ ಸಿ ಹೆಚ್ ವಕೀಲರಿಂದಃ</u>**

1. ಅಪಘಾತದಲ್ಲಿ ನನಗೆ ತಲೆಗೆ, ಬಲಭುಜಕ್ಕೆ ಪೆಟ್ಟಾಗಿರುತ್ತದೆ ಹಾಗೂ ನನ್ನ ಹಲ್ಲು ಮುರಿದಿರುತ್ತದೆ. ಹಲ್ಲು ಮುರಿದ ಬಗ್ಗೆ ಗಾಯದ ಪ್ರಮಾಣ ಪತ್ರದಲ್ಲಿ ನಮೂದು ಇಲ್ಲ ಎಂದರೆ ಸಾಕ್ಷಿಯು ಮ್ಯಾಕ್ಸ ಡೆಂಟಲ್ ಆಸ್ಪತ್ರೆಯಲ್ಲಿಯೇ ಚಿಕಿತ್ಸೆ ಪಡೆದಿರುತ್ತೇನೆ ಎಂದು ಹೇಳುತ್ತಾರೆ. ಅಪಘಾತವಾದ ತಕ್ಷಣ ಮೆಗ್ಗಾನ್ ಆಸ್ಪತ್ರೆಗೆ ಹೋಗಿ ನಂತರ ಮ್ಯಾಕ್ಸ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿರುತ್ತೇನೆ. ತುಳಸಿ ಆಯುರ್ವೆದಿಕ್ ಆಸ್ಪತ್ರೆಯಲ್ಲಿ ಫಿಜಿಯೋ ತೆರಪಿ ಮಾಡಿಸಿರುತ್ತೇನೆ. ನಂತರ ಎಸ್ ಎಸ್ ಆಸ್ಪತ್ರೆಯಲ್ಲಿಯೂ ಸಹ ಚಿಕಿತ್ಸೆ ಪಡೆದಿರುತ್ತೇನೆ. ತುಳಸಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಬಗ್ಗೆ ಬಿಲ್ ಗಳನ್ನು ಹಾಜರು ಪಡಿಸಿರುತ್ತೇನೆ, ಯಾವುದೇ ಡಿಸ್ಚಾರ್ಜ ಸಮರಿ ಇರುವುದಿಲ್ಲ. ತುಳಸಿ ಆಸ್ಪತ್ರೆಯಲ್ಲಿ ಯಾವುದೇ ಚಿಕಿತ್ಸೆ ಪಡೆದಿಲ್ಲ ಎಂದರೆ ಸರಿಯಲ್ಲ. ತುಳಸಿ ಆಸ್ಪತ್ರೆಯ ಬಿಲ್ ಗಳನ್ನು ಖೊಟ್ಟಿ ಸೃಷ್ಠಿ ಮಾಡಿಸಿಕೊಂಡು ಬಂದು ಹಾಜರು ಪಡಿಸಿರುತ್ತೇನೆ ಎಂದರೆ ಸರಿಯಲ್ಲ. ತುಳಸಿ ಆಸ್ಪತ್ರೆಗೆ ಫಿಜಿಯೋ ತೆರಪಿ ಮಾಡಿಸುವುದಕ್ಕಾಗಿ 3 ಬಾರಿ ಹೋಗಿರುತ್ತೇನೆ. ಪ್ರತಿಬಾರಿ ಆಸ್ಪತ್ರೆಗೆ ಹೋದಾಗಲೂ ಹಣ ಪಾವತಿ ಮಾಡಿ ಚಿಕಿತ್ಸೆ ಪಡೆದಿರುತ್ತೇನೆ ಎಂದರೆ ಸರಿ.

2. ಮ್ಯಾಕ್ಸ ಆಸ್ಪತ್ರೆಯಲ್ಲಿ ಫಿಜಿಯೋ ತೆರಪಿ ಮಾಡಿಸುವಂತೆ ಹೇಳಿದ್ದರು. ಫಿಜಿಯೋ ತೆರಪಿ ಅವಶ್ಯಕತೆ ಇದ್ದಿದ್ದರೆ ಮ್ಯಾಕ್ಸ ಆಸ್ಪತ್ರೆಯವರು ಆ ಬಗ್ಗೆ ಬರೆದುಕೊಡುತ್ತಿದ್ದರು ಎಂದರೆ ಸರಿಯಲ್ಲ. ತಲೆಗೆ ಆದ ಗಾಯದಿಂದ ಯಾವುದೇ ಮೂಳೆ ಮುರಿತ ಆಗಿರಲಿಲ್ಲ, ಚಿಕಿತ್ಸೆ ಪಡೆದು ಗುಣ ಆಗಿರುತ್ತದೆ ಎಂದರೆ ಸರಿ. ಅಪಘಾತದಿಂದಾದ ಗಾಯದಿಂದ ನನಗೆ ಯಾವುದೇ ಅಂಗನ್ಯೂನ್ಯತೆ ಆಗಿಲ್ಲ ಎಂದರೆ ಸರಿಯಲ್ಲ. ನನ್ನ ಬಲಕೈನ ಮೂಳೆ ಮುರಿತ ಆಗಿದ್ದರಿಂದ ನನಗೆ ಈಗ ಕೆಲಸ ಮಾಡಲು ಆಗುವುದಿಲ್ಲ. ಅದನ್ನು ಹೊರತು ಪಡಿಸಿ ಬೇರೆ ಯಾವುದೇ ತೊಂದರೆ ಇರುವುದಿಲ್ಲ ಎಂದರೆ ಸರಿ. ದಾವಣಗೆರೆಯ ಎಸ್ ಎಸ್ ಆಸ್ಪತ್ರೆಯಲ್ಲಿ ನಾನು ಫಾಲೋ ಅಪ್ ಚಿಕಿತ್ಸೆಗಾಗಿ ಹೋಗಿರುತ್ತೇನೆ. ಸದರಿ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ದಾಖಲಾಗಿರುವುದಿಲ್ಲ, ಕೇವಲ

ಹೊರರೋಗಿಯಾಗಿ ಚಿಕಿತ್ಸೆ ಪಡೆದಿರುತ್ತೇನೆ. ಸದರಿ ಆಸ್ಪತ್ರೆಗೆ ನಾನು 3–4 ಬಾರಿ ಹೋಗಿರುತ್ತೇನೆ. ನಾನು ಮತ್ತು ನನ್ನ ಗಂಡ ಇಬ್ಬರೂ ಎಸ್ ಎಸ್ ಆಸ್ಪತ್ರೆಗೆ ಫಾಲೋ ಅಪ್ ಚಿಕಿತ್ಸೆಗಾಗಿ ಹೋಗುತ್ತಿದ್ದೆವು. ನಾನು ಎಸ್ ಎಸ್ ಆಸ್ಪತ್ರೆಯಲ್ಲಿ ಯಾವುದೇ ಚಿಕಿತ್ಸೆ ಪಡೆದಿಲ್ಲ , ಕೇವಲ ಅಂಗನ್ಯೂನ್ಯತೆ ಪ್ರಮಾಣ ಪತ್ರ ಮಾತ್ರ ಪಡೆದಿರುತ್ತೇನೆ ಎಂದರೆ ಸರಿಯಲ್ಲ.

3. ಔಷಧೋಪಚಾರಕ್ಕೆ 2 ಲಕ್ಷ ಖರ್ಚು ಮಾಡಿದ್ದು, ಇನ್ನು 1 ಲಕ್ಷ ಹೆಚ್ಚಿನ ಚಿಕಿತ್ಸೆಗೆ ಬೇಕು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ರೂ. 50 ಸಾವಿರ ಟ್ರಾವೆಲಿಂಗ್ ಗೆ ಖರ್ಚು ಮಾಡಿದ್ದೇನೆ ಎಂದು ತೋರಿಸಲು ಯಾವುದೇ ದಾಖಲೆ ಇರುವುದಿಲ್ಲ. ಎಸ್ ಎಸ್ ಆಸ್ಪತ್ರೆಯಲ್ಲಿ ಡಾ. ನಿತಿನ್ ಅವರ ಬಳಿ ನಾನು ತೋರಿಸಿರುತ್ತೇನೆ. ನನ್ನ ವಿನಂತಿಯ ಮೇರೆಗೆ ನನಗೆ ಸಹಾಯವಾಗಲಿ ಎಂದು ಅವರು ನನಗೆ ಅಂಗನ್ಯೂನ್ಯತೆ ಪ್ರಮಾಣ ಪತ್ರ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನನಗೆ ಯಾವುದೇ ಅಂಗನ್ಯೂನ್ಯತೆ ಇಲ್ಲದೇ ಇದ್ದರೂ ಸಹ ಖೊಟ್ಟಿ ಅಂಗನ್ಯೂನ್ಯತೆ ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಅಪಘಾತ ಪೂರ್ವದಲ್ಲಿ ಯಾವ ಕೆಲಸ ಮಾಡುತ್ತಿದ್ದನೋ ಈಗಲೂ ಸಹ ಆ ಕೆಲಸ ಮಾಡಲು ನಾನು ಸಮರ್ಥಳಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಏನೂ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ. ಹೇ. ಕೇ. ಸರಿ ಇದೆ.

ಸಹಿ/–

1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆಎಂಎಫ್ ಸಿ ರಾಣೇಬೆನ್ನೂರು.